## 2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ನಂಜನಗೂಡು

**ಸಿ.ಸಿ. ಸಂಖ್ಯೆ 892/2018**

ಫಿರ್ಯಾಧಿ : ಟಿ. ಬಿ. ಚಂದ್ರ , ಬಿನ್ ಬಸವೇಗೌಡ , ವಯಸ್ಸು ಸುಮಾರು 49 ವರ್ಷ , ವಾಸಃ ತಾಂಡವಪುರ ಗ್ರಾಮ , ಚಿಕ್ಕಯ್ಯನಛತ್ರ ಹೋಬಳಿ , ನಂಜನಗೂಡು ತಾಃ

ವಿರುದ್ಧ

ಆರೋಪಿ : ದೊಡ್ಡೇಗೌಡ , ವಯಸ್ಸು ಸುಮಾರು 38 ವರ್ಷ , ಕೆ ಎಸ್ ಆರ್ ಟಿ ಸಿ ಡ್ರೈವರ್ , ವಾಸಃ ತಾಂಡವಪುರ ಗ್ರಾಮ , ಚಿಕ್ಕಯ್ಯನಛತ್ರ ಹೋಬಳಿ , ನಂಜನಗೂಡು ತಾಃ

**ಆಪಾದನೆ**

*ಶ್ರೀಮತಿ ವಿನುತ ಡಿ. ಎಸ್., ಬಿ.ಎ.ಎಸ್ಸಿ (ಸೆರಿಕಲ್ಚರ್) , ಎಲ್.ಎಲ್.ಬಿ. 2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರಾದ ನಾನು ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆಃ*

ಮೇಲ್ಕಂಡ ಆರೋಪಿಯಾದ ನೀವು ಮತ್ತು ಫಿರ್ಯಾದುದಾರರು ಪರಿಚಯಸ್ಥರಾಗಿದ್ದು, ಸದರಿ ಪರಿಚಯದ ಆಧಾರದ ಮೇಲೆ ಆರೋಪಿಯಾದ ನೀವು ಫಿರ್ಯಾದುದಾರರನ್ನು ಭೇಟಿ ಮಾಡಿ ರೂ 2,50,000/- ಗಳನ್ನು ನಿಮ್ಮ ತುರ್ತು ಅವಶ್ಯಕತೆಗಾಗಿ ದಿನಾಂಕಃ 02.02.2018 ರಂದು ಪಡೆದುಕೊಂಡು ಸದರಿ ಹಣವನ್ನು 02 ತಿಂಗಳೊಳಗಾಗಿ ಮರುಪಾವತಿ ಮಾಡುತ್ತೇನೆಂದು ಹೇಳಿ ಪಡೆದುಕೊಂಡಿರುತ್ತೀರಿ. ಸದರಿ ವಾಯಿದೆ ಕಳೆದ ನಂತರ ಫಿರ್ಯಾದುದಾರರು ನಿಮ್ಮನ್ನು ಬೇಟಿ ಮಾಡಿ ಕೇಳಿಕೊಂಡಾಗ ಆರೋಪಿಯಾದ ನೀವು ನಿಮ್ಮ ಉಳಿತಾಯ ಖಾತೆ ಹೊಂದಿರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಕುವೆಂಪುನಗರ ಶಾಖೆಯ ಚೆಕ್ ನಂ. 686470 ಗೆ ರೂ 2,50,000/- ಗಳನ್ನು ದಿನಾಂಕಃ 06.04.2018 ಎಂದು ನಮೂದಿಸಿ ಫಿರ್ಯಾದುದಾರರ ಹೆಸರಿಗೆ ನೀಡಿರುತ್ತೀರಿ. ನಂತರ ಫಿರ್ಯಾದುದಾರರು ಸದರಿ ದಿನಾಂಕದಂದೆ ತಮ್ಮ ಖಾತೆ ಹೊಂದಿರುವ ಕೆನರ ಬ್ಯಾಂಕ್, ನಂಜನಗೂಡು ಶಾಖೆಯ ಮುಖಾಂತರ ಹಾಜರ್ಪಡಿಸಲಾಗಿ ಸದರಿ ಬ್ಯಾಂಕಿನವರು ಆರೋಪಿಯಾದ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂಬ ಹಿಂಬರಹದೊಂದಿಗೆ ದಿಃ 09.04.2018 ರಂದು ನಗಧೀಕೃತಗೊಳ್ಳದೆ ತಿರಸ್ಕೃತಗೊಂಡಿರುತ್ತದೆ ಎಂದು ತಿಳಿಸಿರುತ್ತಾರೆ. ತದನಂತರ ಫಿರ್ಯಾದುದಾರರು ದಿಃ 24..4.2018 ರಂದು ಮೇಲ್ಕಂಡ ವಿಷಯವನ್ನು ನಮೂದಿಸಿ ನಿಮಗೆ ವಕೀಲರ ಮೂಲಕ ನಿಮಗೆ

ನೋಂದಾಯಿತ ಅಂಚೆಯ ಮೂಲಕ ನೋಟಿಸನ್ನು ಕಳುಹಿಸಿದ್ದು, ಈ ಸಂಬಂಧ ನೀವು ಯಾವುದೇ ಕ್ರಮ ಕೈಗೊಳ್ಳದೇ ಇದ್ದುದರಿಂದ ಆರೋಪಿಯಾದ ನೀವು ನೆಗೋಷಿಯಲ್ ಇನ್ಸ್ಟುಮೆಂಟ್ ಕಾಯ್ದೆ ಕಲಂ 138 ರಡಿಯಲ್ಲಿ ದಂಡನೀಯವಾದ ಅಪರಾದವನ್ನು ಈ ನ್ಯಾಯಾಲಯದ ಸಜ್ಞಾಯಲ್ಲಿ ಎಸಗಿರುವಿರೆಂದು ನಿಮ್ಮ ಮೇಲೆ ಅಪಾದಿಸಲಾಗಿದೆ.

ಪ್ರಶ್ನೆ-1 ಈಗ ಓದಿ ಹೇಳಿದ ನಿಮ್ಮ ಮೇಲಿನ ಅಪಾದನೆಯನ್ನು ಕೇಳಿದ್ದೀರಾ?

ಉತ್ತರ ಕೇಳಿದೆ.

ಪ್ರಶ್ನೆ-2 ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥಾ ವಿಚಾರಣೆಯಗಬೆಕೋ?

ಉತ್ತರ ಸುಳ್ಳು ಆಪಾದನೆ ಒಪ್ಪಿಕೊಳ್ಳುವುದಿಲ್ಲ. ವಿಚಾರಣೆಯಾಗಲಿ.

(ಮೇಲ್ಕಂಡ ಆಪಾದನೆಯನ್ನು ಆರೋಪಿತನಿಗೆ ಕನ್ನಡದಲ್ಲಿ ಓದಿ ಹೇಳಿ ನಂತರ ಅವರು ಉತ್ತರಿಸಿದಂತೆಯೇ ಬರೊಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆಯೆಂದು ದಿನಾಂಕ:08.03.2021 ರಂದು ತೆರೆದ ನ್ಯಾಯಾಲಯದಲ್ಲಿ ದೃಢೀಕರಿಸುತ್ತೇನೆ.)

8/3/21.

2 ನೇ ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ನಂಜನಗೂಡು

Doddamma